# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್-35 ಅರಮನೆನಗರ, 17ನೇ ಅಡ್ಡರಸ್ತೆ, ಸದಾಶಿವನಗರ, ರಾಮಕೃಷ್ಣ ಹೆಗಡೆ ಸಂಕೀರ್ಣ, ಮೊದಲನೆ ಮಹಡಿ, ಸದಾಶಿವನಗರ,ಬೆಂಗಳೂರು

ಸಂಖ್ಯೆ: ಸ.ಅ(ಅರಮನೆನಗರ)/ವಾರ್ಡ್-35/ವಾ.ಕ/ಪಿಆರ್/08/21-22

ದಿನಾಂಕ: 12/11/2021

**ದಿನಾಂಕ: 12/11/2021 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು:**

**ಸಭೆಯಲ್ಲಿ ಹಾಜರಿದ್ದವರು:**

1. ವಾರ್ಡ್ ಸಮಿತಿ ಸದಸ್ಯರು.
2. ಹಿರಿಯ ಆರೋಗ್ಯ ಪರಿವೀಕ್ಷಕರು
3. ಕಿರಿಯ ಆರೋಗ್ಯ ಪರಿವೀಕ್ಷಕರು
4. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮತ್ತಿಕೆರೆ ಉಪ-ವಿಭಾಗ ಬಿಬಿಎಂಪಿ
5. ಬೆಸ್ಕಾಂ ಅಧಿಕಾರಿಗಳು ಸದಾಶಿವನಗರ
6. ಬಿಡಬ್ಲ್ಯೂಎಸ್ಎಸ್‌ಬಿ ಅಧಿಕಾರಿಗಳು ಮತ್ತಿಕೆರೆ ಮತ್ತು ಸದಾಶಿವನಗರ
7. ಕಂದಾಯ ಅಧಿಕಾರಿಗಳು ಸದಾಶಿವನಗರ

ವಾರ್ಡ್ ಸಮಿತಿ ಸಭೆಯ ಕಾರ್ಯದರ್ಶಿಯಾದ ಶ್ರೀಮತಿ ಹರ್ಷಾ ನಾಯಕ್ ರವರು ವಾರ್ಡ್ ಸಮಿತಿಯ ಅಧ್ಯಕ್ಷರಾದ ಶ್ರೀ ಓಂ ಪ್ರಕಾಶ್, ವಾರ್ಡ ನೋಡಲ್ ಅಧಿಕಾರಿ, ಸಮಿತಿ ಸದಸ್ಯರನ್ನು ಹಾಗೂ ಅಧಿಕಾರಿ/ಸಿಬ್ಬಂದಿಗಳನ್ನು ಸ್ವಾಗತಿಸುತ್ತಾ, ವಾರ್ಡ್ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳ ಬಗ್ಗೆ ಚರ್ಚಿಸಲಾಯಿತು.

**ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:**

- ಸದಾಶಿವನಗರದ ರಸ್ತೆ ಬದಿಯಲ್ಲಿ ಡೆಬ್ರಿಸ್ ಬಿದ್ದಿರುವ ಬಗ್ಗೆ ತಿಳಿಸಿದರು. –**ಈ ಬಗ್ಗೆ ಸದರಿ ರಸ್ತೆಯಲ್ಲಿ ಪಾಲಿಕೆಯ ಬೃಹತ್ ರಸ್ತೆಗಳ ವತಿಯಿಂದ ರಸ್ತೆ ಬದಿ ಚರಂಡಿ ದುರಸ್ಥಿ ಪಡಿಸುವ ಕಾಮಗಾರಿ ನಡೆಯುತ್ತಿದ್ದು, ಡೆಬ್ರಿಸ್ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದು.**
- ವಾರ್ಡ್ ವ್ಯಾಪ್ತಿಯಲ್ಲಿ ಮರಗಳ ರೆಂಬೆಗಳು ಮನೆಯೊಳಗೆ ಬಂದಿದ್ದು, ಈ ಬಗ್ಗೆ ಬಿಬಿಎಂಪಿ ಅರಣ್ಯ ಇಲಾಖೆಯ ಗಮನಕ್ಕೆ ತಂದರು ಕಾರ್ಯವಾಗಿರುವುದಿಲ್ಲ- **ಬಿಬಿಎಂಪಿ ಅರಣ್ಯ ಇಲಾಖೆ ರವರ ಅಗತ್ಯ ಕ್ರಮಕ್ಕಾಗಿ**
- ವಾರ್ಡ್ ವ್ಯಾಪ್ತಿಯಲ್ಲಿ ಸಣ್ಣ ಸಣ್ಣ ಗುಂಡಿಗಳಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿರುತ್ತದೆ- **ಅಭಿಯಂತರರು, ಬೃಹತ್ ರಸ್ತೆಗಳು ಹಾಗೂ ಅಭಿಯಂತರರು ವಾರ್ಡ್ ರಸ್ತೆಗಳ ಅಗತ್ಯ ಕ್ರಮಕ್ಕಾಗಿ**
- ವಾರ್ಡ್ ವ್ಯಾಪ್ತಿಯಲ್ಲಿ ಮನೆ ನಿರ್ಮಿಸುವವರು ಮತ್ತು ನವೀಕರಿಸುವವರು ರಸ್ತೆ ಬದಿಯಲ್ಲಿ ಕಟ್ಟಡ ಸಾಮಾಗ್ರಿಗಳನ್ನು ಶೇಖರಿಸಿ ಪಾದಚಾರಿಗಳು ರಸ್ತೆ ಬದಿಯಲ್ಲಿ ನಡೆಯದಂತೆ ಅಡಚಣೆ ಉಂಟು ಮಾಡಿರುತ್ತಾರೆ—**ಈ ಬಗ್ಗೆ ADTP West ರವರ ಅಗತ್ಯ ಕ್ರಮಕ್ಕಾಗಿ**
- 10ನೇ ಮುಖ್ಯರಸ್ತೆ ಸದಾಶಿವನಗರದಲ್ಲಿ ಬೃಹತ್ ರಸ್ತೆಗಳಿಂದ ಪುಟಫಾತ್ ಕಾಮಗಾರಿ ಕೈಗೊಂಡಿದ್ದು, ಸದರಿ Interlock Paver ಕುಸಿದು ಕೊಂಡಿರುತ್ತದೆ—**ಈ ಬಗ್ಗೆ ಬೃಹತ್ ರಸ್ತೆಗಳ ಅಗತ್ಯ ಕ್ರಮಕ್ಕಾಗಿ**
- ವಾರ್ಡ್ ವ್ಯಾಪ್ತಿಯಲ್ಲಿ Street Name Boards ಅತ್ಯಾವಶ್ಯಕವಾಗಿದ್ದು, ಅಳವಡಿಸಲು ತಿಳಿಸಿರುತ್ತಾರೆ—**ಈ ಬಗ್ಗೆ ವಾರ್ಡ್ ಅಭಿಯಂತರರ ಅಗತ್ಯ ಕ್ರಮಕ್ಕಾಗಿ**
- Mosquito Spraying ಮತ್ತಿಕೆರೆ ವ್ಯಾಪ್ತಿಯಲ್ಲಿ ಹೆಚ್ಚಾಗಿ ಕಾರ್ಯನಿರ್ವಹಿಸಲು ತಿಳಿಸಿರುತ್ತಾರೆ—**ಈ ಬಗ್ಗೆ ಹಿರಿಯ ಆರೋಗ್ಯ ಪರಿವೀಕ್ಷಕರ ಅಗತ್ಯ ಕ್ರಮಕ್ಕಾಗಿ**

ಮು.ಪ.ನೋ

ಸಾರ್ವಜನಿಕ ಹಿತದೃಷ್ಟಿಯಿಂದ ಅಧಿಕಾರಿಗಳು ಕಾರ್ಯೋನ್ಮುಖವಾಗಿ ಕೆಲಸ ನಿರ್ವಹಿಸಲು ತಿಳಿಸಿ, ಚರ್ಚಿಸಲಾಗಿರುವಂತಹ ವಿಷಯಗಳ ತ್ವರಿತ ಗತಿಯಲ್ಲಿ ನಿರ್ವಹಿಸಲು ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ನೋಡೆಲ್ ಅಧಿಕಾರಿಯವರ ಅನುಮೋದನೆ ಮೇರೆಗೆ]**

ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು
ವಾರ್ಡ್–35 ಅರಮನೆನಗರ

**ಪ್ರತಿಯನ್ನು:**

23. ಪೂಜ್ಯ ಮಹಾಪೌರರು ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
24. ಪೂಜ್ಯ ಉಪ ಮಹಾಪೌರರು ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
25. ಮಾನ್ಯ ಆಯುಕ್ತರು ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
26. ಕಾರ್ಯದರ್ಶಿಗಳು ಕೌನ್ಸಿಲ್ ಕಾರ್ಯಲಯ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
27. ವಾರ್ಡ್ ಸಮಿತಿ ಸದಸ್ಯರು ಬಿಬಿಎಂಪಿ ರವರ ಅವಗಾಹನೆಗಾಗಿ ಮಂಡಿಸಿದೆ.
28. ಮಾನ್ಯ ಜಂಟಿ/ಉಪ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
29. ಮಾನ್ಯ ಕಂದಾಯ ಅಧಿಕಾರಿ(ಮಲ್ಲೇಶ್ವರಂ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
30. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ವಿದ್ಯುತ್/ತೋಟಗಾರಿಕೆ/ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ರವರ ಅವಗಾಹನೆಗಾಗಿ ಮಂಡಿಸಿದೆ.
31. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ಮತ್ತಿಕೆರೆ) ಉಪ ವಿಭಾಗ ರವರ ಅವಗಾಹನೆಗಾಗಿ ಮಂಡಿಸಿದೆ.
32. ಸಹಾಯಕ ಕಂದಾಯ ಅಧಿಕಾರಿ(ಕಲ್ಯಾಣ–ಪಶ್ಚಿಮ) ರವರ ಅವಗಾಹನೆಗಾಗಿ ಮಂಡಿಸಿದೆ.
33. ಕಛೇರಿ ಕಡತಕ್ಕೆ.